ಆ) ರಾಜ್ಯದಲ್ಲಿ ಮಂಡಲ ಪಂಚಾಯಿತಿಗಳ ರಚನೆಯಿಂದಾಗಿ ಕಂದಾಯ ಇಲಾಖೆಯ ೭೦೯ ಪ್ರಥಮ ದರ್ಜೆ ಸಹಾಯಕರನ್ನು ಪ್ರತಿನಿಯೋಜನೆ ಮೇಲೆ ನೇಮಕ ಮಾಡಲಾಗಿದ್ದು ತತ್ಪರಿಣಾಮವಾಗಿ ಉದ್ಭವಿಸಿರುವ ಖಾಲಿ ಹುದ್ದೆಗಳಿಗೆ ನೇರ ನೇಮಕಾತಿಯನ್ನು ತೊಡೆದುಹಾಕಿ ಹಾಲಿ ಗ್ರಾಮ ಲೆಕ್ಕಿಗರು ಮತ್ತು ದ್ವಿತೀಯ ದರ್ಜೆ ಸಹಾಯಕರಿಗೆ ೬೦ : ೪೦ರ ಅನುಪಾತದಲ್ಲಿ ಮುಂಬಡ್ತಿ ನೀಡಲು ಪ್ರಸ್ತುತ ವ್ಯಾಪ್ತಿಯ ಮತ್ತು ನೇಮಕಾತಿ ನಿಯಮಗಳಿಗೆ ತಾತ್ಕಾಲಿಕ ತಿದ್ದುಪಡಿ ಮಾಡಲಾಗಿದೆ. ಓಗೆ ಹಾಲಿ ಗ್ರಾಮಲೆಕ್ಕಿಗರಿಗೆ ಬಡ್ತಿ ನೀಡುವ ಮೂಲಕ ತೆರವಾಗುವ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವ ಸಾಧ್ಯತೆಯನ್ನು ತೀವ್ರವಾಗಿ ಪರಿಶೀಲಿಸಲಾಗುತ್ತಿದೆ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೫೧ ಗ್ರಾಮ ಲೆಕ್ಕಿಗರ ಹುದ್ದೆಯನ್ನು ಕಡಿಮೆ ಮಾಡಿದ್ದರಿಂದ ರೆವಿನ್ಯೂ ಇಲಾಖೆಯಲ್ಲಿ ಕೆಲಸಕ್ಕೆ ತೊಂದರೆಯಾಗಿದೆಯೆ ಎಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದನ್ನು ಪರಿಶೀಲನೆ ನಡೆಸುತ್ತೀರಾ ? ಮತ್ತು ಬಡ್ತಿಯಾದ ಸ್ಥಾನಕ್ಕೆ ನೇರ ನೇಮಕಾತಿ ಯಾವಾಗ ಆಗುತ್ತದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಈ ಮನೆಯಲ್ಲಿ ಅನೇಕ ಸಲ ಈ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಗ್ರಾಮಲೆಕ್ಕಿಗರು ಮಂಡಲ್ ಪಂಚಾಯ್ತಿ ಸೆಕ್ರಟರಿಗಳಾಗಿ ಕೆಲಸ ಮಾಡುತ್ತಿದ್ದರು. ಈ ಹುದ್ದೆಗೆ ಬೇರೆಯವರು ಬಂದಿದ್ದರಿಂದ ಅಷ್ಟು ಸ್ಥಾನಗಳನ್ನು ಕಡಿಮೆ ಮಾಡಿ, ಇದ್ದ ಗ್ರಾಮ ಲೆಕ್ಕಿಗರಿಗೆ, ಅವರ ಕ್ಷೇತ್ರವನ್ನು ವಿಸ್ತರಣೆ ಮಾಡಿದ್ದೇವೆ. ಇದು ತೊಂದರೆಯಾಗುತ್ತದೆ ಎಂಬ ವಿಚಾರವನ್ನು ಪರಿಶೀಲನೆ ಮಾಡುತ್ತೇವೆ. ಇದು ತೊಂದರೆಯಾದರೆ, ಹೆಚ್ಚು ಗ್ರಾಮಲೆಕ್ಕಿಗರಿಗೆ ಕೊಡುವುದಕ್ಕೆ ಪ್ರಯತ್ನಮಾಡುತ್ತೇನೆ.

ನಾಲ್ಕುವರೆ ಚೈನ್ ಕುಮ್ಕಿ ಸ್ಥಳದ ದರ್ಖಾಸ್ತು ನೀಡುವ ವಿಚಾರ

೯೦೧ (೧೯೦೪) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಕಂದಾಯ, ಯೋಜನೆ, ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದ ರೈತರು ತಮ್ಮ ಗದ್ದೆಗಳನ್ನು ಬೇಸಾಯ ಮಾಡಬೇಕಿದ್ದರೆ ಗದ್ದೆಗಳ ಪಕ್ಕದಲ್ಲಿರುವ ಕುಮ್ಕಿ ಸ್ಥಳ ಅವರಿಗೆ ಸಿಗದಿದ್ದರೆ ಬೇಸಾಯ ಮಾಡುವುದು ಸಾಧ್ಯವಿಲ್ಲವೆಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಕುಮ್ಕಿ ಸ್ಥಳಗಳನ್ನು ಕೊಡಿಸಬೇಕೆಂದು ರೈತರು ಅನೇಕ ವರ್ಷಗಳಿಂದ ಬೇಡಿಕೆ ಸಲ್ಲಿಸಿರುವುದಕ್ಕೆ ಸರ್ಕಾರದವರು ಕೈಕೊಂಡ ಕ್ರಮಗಳೇನು ?

ಇ) ರೈತರ ಗದ್ದೆ ಒಕ್ಕಿದ ಕುಮ್ಕಿ ಸ್ಥಳ ನಾಲ್ಕುವರೆ ಚೈನ್‌ವರೆಗೆ ದರ್ಖಾಸ್ತು ಮಾಡಿಸಿ ಕೊಡುವುದು ಯಾವಾಗ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಹೌದು.

ಆ) ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ರ ಅಧಿನಿಯಮ ೭೯(೨) ರನ್ವಯ ಕುಮ್ಕಿ ಸವಲತ್ತನ್ನು ವರ್ಗದಾರರು ಉಪಯೋಗಿಸುವ ಅವಕಾಶವನ್ನು ಹೊಂದಿದ್ದಾರೆ. ಆದರೆ, ಯಾವುದೇ ವ್ಯಕ್ತಿಗಳಿಗೆ ಸದರಿ ಜಮೀನನ್ನು ಮೇಲ್ಕಂಡ ಕಾಯ್ದೆಯನ್ವಯ ಮಂಜೂರು ಮಾಡುವುದಕ್ಕೆ ಅವಕಾಶ ವಿರುವುದಿಲ್ಲ. ಈ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ಸಂಪುಟದ ಉಪಸಮಿತಿಯು ನೇಮಕಗೊಂಡಿದ್ದು ವಿಷಯವು ಸರ್ಕಾರದ ಪರಿಶೀಲನಾ ಹಂತದಲ್ಲಿದೆ.

ಇ) ಸಂಪುಟದ ಉಪ ಸಮಿತಿಯು ಸಲ್ಲಿಸಿರುವ ವರದಿಯಲ್ಲಿ ಕ್ರಮಬದ್ಧಗೊಳಿಸುವ ವಿಚಾರವಾಗಲಿ, ಅಥವಾ ದರಖಾಸ್ತು ಮಂಜೂರಿ ಮಾಡುವ ವಿಚಾರದಲ್ಲಾಗಲಿ, ಅಸ್ಪದವಿದ್ದಲ್ಲಿ ಆ ರೀತಿ ಕ್ರಮ ಜರುಗಿಸಲಾಗುವುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಧ್ಯಕ್ಷರೇ, ಕೂರ್ಗ್‌ನಲ್ಲಿ ಬಾಣೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಮ್ಕಿ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಬೆಟ್ಟ ಈ ಒಂದು ವರ್ಗದ ಜಮೀನುಗಳಿಗೆ ಯಾವರೀತಿ ಹಕ್ಕು ಕೊಡಬೇಕೆಂಬ ಬಗ್ಗೆ ಸಚಿವಸಂಪುಟದ ಸಬ್‌ಕಮಿಟಿ ಈಗಾಗಲೇ ಪರಿಶೀಲನೆ ಮಾಡಿದೆ. ಅದನ್ನು ಮಂತ್ರಿಮಂಡಲದ ಸಭೆಯಲ್ಲಿ ಪರಿಶೀಲನೆ ಮಾಡಿದ ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ವಸಂತ ಬಂಗೇರ.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರವಾಗಿ ನನ್ನ ಪ್ರಶ್ನೆಗಳನ್ನೇ ಕಳುಹಿಸಿಕೊಟ್ಟಿದ್ದಾರೆ. ನನ್ನ ಪ್ರಶ್ನೆಗಳನ್ನೇ ಪ್ರಿಂಟ್ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಅದರಲ್ಲಿ ನಾನು ಮೂರು ಪ್ರಶ್ನೆಗಳನ್ನು ಕೇಳಿದ್ದೇನೆ. ಒಂದನೇ ಪ್ರಶ್ನೆಗೆ ಹೌದು, ಎರಡನೇ ಪ್ರಶ್ನೆಗೆ ಪರಿಶೀಲಿಸಲಾಗುವುದು, ಮೂರನೆ ಪ್ರಶ್ನೆಗೆ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದಕ್ಕೆಲ್ಲಾ ಬೇರೆ ಉತ್ತರ ಇದೆ. ಕಳುಹಿಸಿಕೊಡುತ್ತೇನೆ.

ಶ್ರೀ ಕೆ. ವಸಂತ ಬಂಗೇರ.—ಇದು ದಕ್ಷಿಣ ಕನ್ನಡ ಜಿಲ್ಲೆಯ ರೈತರ ಗಂಭೀರವಾದ ಪ್ರಶ್ನೆ ೧೯೮೩ ರಿಂದಲೂ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಶಾಸಕರೂ ಪಕ್ಷ ಭೇದವನ್ನು ಮರೆತು ಈ ಕುಮ್ಕಿ ರೈಟನ್ನು ಕೊಡಬೇಕೆಂದು ಸರಕಾರದ ಮೇಲೆ ಒತ್ತಾಯವನ್ನು ಹೇರಿದ್ದಾರೆ. ಸರಕಾರ ಒಂದು ಸಂದರ್ಭದಲ್ಲಿ ಎರಡೂವರೆ ಚೈನು ಕುಮ್ಕಿ ಕೊಡುವುದಾಗಿಹೇಳಿತ್ತು. ಆದರೆ ನಾಲ್ಕೂವರೆ ಚೈನ್ ಕುಮ್ಕಿಯನ್ನು ಕೊಡಬೇಕೆಂದು ಹೇಳುವಂತಹ ವಿಚಾರದಲ್ಲಿ ಪುನಃ ಸರಕಾರಕ್ಕೆ ಒತ್ತಾಯಿಸಿದಾಗ ಅದಕ್ಕೆ ಒಂದು ಕಮಿಟಿ ಮಾಡಿದರು. ಆದಷ್ಟು ಶೀಘ್ರವಾಗಿ ಕೊಡಿಸುತ್ತೇವೆಂದು ಹೇಳಿದರು. ಆದರೆ ಇಲ್ಲಿ ನಾನು ಪ್ರಶ್ನೆ ಕೇಳಿದ್ದಕ್ಕೆ ಹೌದು ಪರಿಶೀಲಿಸಲಾಗುವುದು ಎಂದು ಉತ್ತರ ಕೊಟ್ಟಿದ್ದಾರೆ. ನಾನು ಕೇಳಿದ್ದು ಇಷ್ಟೇ. ರೈತರು ಗದ್ದೆಯನ್ನು ಸಾಗುವಳಿ ಮಾಡಬೇಕಾಗಿದ್ದರೆ, ಕೃಷಿ ಮಾಡಬೇಕಾಗಿದ್ದರೆ, ಗದ್ದೆಯ ಒತ್ತುವರಿಯಲ್ಲಿದ್ದ ಜಾಗವನ್ನು ಕುಮ್ಕಿ ಎಂದು ಕರೆಯುತ್ತಾರೆ. ಆದರಲ್ಲಿ ಏನು ಸೌದೆ ಸೊಪ್ಪು ಕಟ್ಟಿಗೆ ಮರಗಳು ಇಲ್ಲದಿದ್ದರೆ ಅದನ್ನು ಸಾಗುವಳಿ ಮಾಡುವುದಕ್ಕೆ ಸಾಧ್ಯವಿಲ್ಲ. ಈ ವಿಚಾರ ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಸರಿಯಾಗಿ ತಿಳಿದಿದೆ. ಇದು ಬಹಳ ಪ್ರಮುಖವಾದ ವಿಚಾರ ಎಂದು ತಿಳಿದುಕೊಳ್ಳಬೇಕು. ಸರಕಾರದವರು ನಾಲ್ಕೂವರೆ ಚೈನ್ ಕುಮ್ಕಿ ಸ್ಥಳ ಕೊಟ್ಟರೆ ರೈತರು ಧನ್ಯದಾದ ಸಲ್ಲಿಸುತ್ತಾರೆ. ನಿಮ್ಮ ಸರಕಾರಕ್ಕೆ ಧನ್ಯವಾದ ಸಲ್ಲಿಸುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ರೈತರೂ ನಿಮ್ಮ ಸರಕಾರದ ಪರವಾಗಿ ಇರುತ್ತಾರೆ. ಎಷ್ಟು ದಿನಗಳ ಒಳಗಾಗಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೀವೆ ಎಂದು ಹೇಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಪ್ರಶ್ನೆ ಬಂದಮೇಲೆ ಮಂತ್ರಿಮಂಡಲದ ಉಪಸಮಿತಿಯನ್ನು ನೇಮಿಸಿ ವಿಚಾರಣೆ ಮಾಡಿದ್ದೇವೆ. ಕುಮ್ಕಿ ಜಮೀನು ಒಂದೇ ಪ್ರಶ್ನೆ ಅಲ್ಲ. ಬೇರೆ ಬೇರೆ ಹೆಸರಿನಲ್ಲಿ ಈ ರೀತಿ ಉಪಭೋಗ ಮಾಡಿಕೊಂಡಿರುವ ಜಮೀನುಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕೆಂದು ಮಂತ್ರಿಮಂಡಲದ ಉಪಸಮಿತಿ ರಿಪೋರ್ಟ್ ಕೊಟ್ಟಿದೆ. ಆದಷ್ಟು ಬೇಗ ಇದರ ಬಗ್ಗೆ ಮಂತ್ರಿ ಮಂಡಲದಲ್ಲಿ ಚರ್ಚೆ ಮಾಡಿ ನಿರ್ಣಯ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ವಸಂತ ಬಂಗೇರ.—ಒಂದೇ ಪ್ರಶ್ನೆ ಕೇಳುತ್ತೇನೆ. ಅಧ್ಯಕ್ಷರೇ, ಇದು ಬಹಳ ಪ್ರಮುಖವಾದ ಪ್ರಶ್ನೆ. ಆದಷ್ಟು ಶೀಘ್ರವಾಗಿ ಮಾಡುತ್ತೇವೆ ಎಂದು ಮಾನ್ಯ ಸಚಿವರು ಹೇಳುತ್ತಾರೆ. ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನಾಗಿದೆ ಎಂದರೆ ೧೯೮೩ ರಿಂದ ಕುಮ್ಕಿ ಕೊಡುತ್ತಾರೆ ಎಂಬ ವಿಚಾರ ತಿಳಿದು ಅರಣ್ಯ ಇಲಾಖೆಯವರು ಎಲ್ಲಾ ಕುಮ್ಕಿ ಸ್ಥಳವನ್ನು ಆಕ್ರಮಣ ಮಾಡಿ ಅಲ್ಲಿ ಮರಬೆಳೆಸಿದ್ದಾರೆ. ಪರಿಶೀಲನೆಗೆ ಎಂದು ಎರಡು ವರ್ಷ ಮುಂದೂಡಿದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಮಿಕರು ಅನೇಕ ವರ್ಷಗಳಿಂದ ಆಕ್ರಮಣ ಮಾಡಿ ಅಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅವರ ಗತಿ ಏನು ? ಅವರಿಗೆ ಏನು ಮಾಡುತ್ತೀರಾ ? ನಮ್ಮ ಬೇಡಿಕೆ ನಾಲ್ಕೂವರೆ ಚೈನ್ ಕೊಡಬೇಕೆಂದು ಇದೆ. ಇದಕ್ಕೆ ಕಮಿಟಿ ಮಾಡಿದ್ದೇವೆ ಎಂದು ಹೇಳುತ್ತೀರಿ. ಈ ಕಮಿಟಿಯನ್ನು ಎಲ್ಲೆಲ್ಲಿ ನೇಮಕ ಮಾಡಿದ್ದೀರಿ, ಕಮಿಟಿಯಲ್ಲಿ ಯಾರಿದ್ದಾರೆ, ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದು ಹೇಳುತ್ತೀರಾ ? ಹಿಂದೆ ಸರಕಾರ ನಾಲ್ಕೂವರೆ ಚೈನು ಕುಮ್ಕಿ ಜಮೀನಿಗೆ ದರಖಾಸ್ತು ಕೊಟ್ಟಿದೆ ಇನ್ನು ಮುಂದೆಯೂ ನಾಲ್ಕೂವರೆ ಚೈನು ದರಖಾಸ್ತು ಕೊಡಿಸುತ್ತೀರಾ ? ಎಷ್ಟು ಸಮಯದಲ್ಲಿ ಕೊಡಿಸುತ್ತೀರಿ ?

ಶ್ರೀ ಎಸ್. ಆರ್. ಬೊಪ್ಪಾಯಿ.—ಫಾರೆಸ್ಟ್ ಇಲಾಖೆಗೆ ಭೂಮಿಯನ್ನು ಇದರಲ್ಲಿ ಕೊಡುವುದಕ್ಕೆ ಕಮಿಟಿಗಳನ್ನು ಮಾಡಿದ್ದೇವೆ. ಆ ಕಮಿಟಿ ಪೊಸ್ಟಪನ್ ಮಾಡುತ್ತಿಲ್ಲ ಎಂದು ಹೇಳುತ್ತಾರೆ. ಆ ಕಮಿಟಿ ಬೇಗ ಸಭೆ ಕರೆದು ಇತ್ಯರ್ಥ ಮಾಡುವುದಕ್ಕೆ ಹೇಳುತ್ತೇನೆ. ಸೌತ್ ಕೆನರಾದಲ್ಲಿ ಕಮಿಟಿ ಆಗಿದೆ. ಅದರ ಬಗ್ಗೆ ನನ್ನ ಹತ್ತಿರ ವಿವರ ಇಲ್ಲ. ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಈ ಕಮಿಟಿ ಮಾಡಿದ್ದಾರೆ. ನಿಮ್ಮ ತಾಲ್ಲೂಕಿನಲ್ಲಿ ಆಗದಿದ್ದರೆ ಬೇಗ ಮಾಡುವುದಕ್ಕೆ ಹೇಳುತ್ತೇನೆ.

ಸ್ವೀಪರ್ಸ್ ಪದವೀಧರರನ್ನು ಖಾಯಂಗೊಳಿಸುವುದು

೯೦೯ (೨೩೬೭) ಶ್ರೀ ಚಂದ್ರಶೇಖರ ಮಾಮನಿ (ಧಾರವಾಡ).—ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿರುವ ಸ್ವೀಪರ್ಸ್ ಪದವೀಧರರ ಸಂಖ್ಯೆ ಎಷ್ಟು, ಆ ಪೈಕಿ ಸರ್ಕಾರದ ಸೇವೆಯಲ್ಲಿ ಖಾಯಂ ಆಗಿ ನೌಕರಿ ಸೇರಿದವರ ಸಂಖ್ಯೆ ಎಷ್ಟು, ಹಾಗೂ ಉಳಿದವರ ಸಂಖ್ಯೆ ಎಷ್ಟು ?

ಆ) ಉಳಿದ ಸ್ವೀಪರ್ಸ್ ಪದವೀಧರರಿಗೆ ೪-೬-೮೭ರ ಸರ್ಕಾರದ ಆದೇಶದ ಪ್ರಕಾರ ಶೇಕಡ ೪೦ ರಷ್ಟು ತುಂಬಲು ಅವಕಾಶವಿದ್ದರೂ ಕೂಡ ಸದರಿಯವರನ್ನು ತುಂಬದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಉಳಿದ ಸ್ವೀಪರ್ಸ್ ಪದವೀಧರರನ್ನು ಸರ್ಕಾರಿ ಸೇವೆಯಲ್ಲಿ ಅಥವಾ ಇತರೇ ಸೇವೆಯಲ್ಲಿ ಖಾಯಂ ಆಗಿ ಪರಿವರ್ತಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಎಸ್. ಕೆ. ಕಾಂತ(ಕಾರ್ಮಿಕ ಮಂತ್ರಿಗಳು).—

ಅ) ಸ್ವೀಪರ್ಸ್ ಪದವೀಧರರ ಸಂಖ್ಯೆ ದಿನಾಂಕ ೧-೧-೮೬ರಂದು ೯,೦೧೯ ದಿನಾಂಕ ೧-೧-೮೭ ರಂದು ೮,೫೦೦ ಮತ್ತು ದಿನಾಂಕ ೧-೧-೮೮ ರಂದು ೭,೫೫೪ ಆಗಿರುತ್ತದೆ. ಕರ್ನಾಟಕ ಲೋಕಸೇವಾ ಆಯೋಗದಿಂದ ಉದ್ಯೋಗ ಪಡೆಯುತ್ತಿರುವ ಸ್ವೀಪರ್ಸ್ ಪದವೀಧರರ ವಿವರ ಈ ರೀತಿ ಇದೆ:—

ಪ್ರಥಮದರ್ಜೆ ಸಹಾಯಕರು — ೪೫೪

ಎರಡನೇದರ್ಜೆ ಸಹಾಯಕರು — ಸುಮಾರು ೫೦೦

ವಾಣಿಜ್ಯತೆರಿಗೆ ಪರಿವೀಕ್ಷಕರು — ೫೫

ಉಳಿದ ಸ್ವೀಪರ್ಸ್ ಪದವೀಧರರ ಸಂಖ್ಯೆ ೬,೫೦೦

ಆ) ಹೌದು. ಸ್ವೀಪರ್ಸ್ ಪದವೀಧರರಿಗೆ ಖಾಯಂ ಉದ್ಯೋಗ ಒದಗಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಹೌದು. ದಿನಾಂಕ ೪-೬-೮೭ರ ಆದೇಶದ ಪ್ರಕಾರ ಖಾಯಂ ಕೆಲಸಗಳಿಗೆ ಸ್ವೀಪರ್ಸ್ ಪದವೀಧರರ ಹೆಸರುಗಳನ್ನು ಸೂಚಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

೧೧-೩೦ ಎ. ಎಂ:

ಶ್ರೀ ಚಂದ್ರಶೇಖರ ಎಂ. ಮಾಮನಿ.—ಮಾನ್ಯ ಅಧ್ಯಕ್ಷರೇ, ಮೊದಲನೆ ಪ್ರಶ್ನೆಯಲ್ಲಿ ಉತ್ತರವಾಗಿ ಮಾನ್ಯ ಮಂತ್ರಿಗಳು ೧-೧-೮೭ಕ್ಕೆ ೯,೦೧೯ ಸ್ವೀಪರ್ಸ್ ಪದವೀಧರರು ಇದ್ದು ಅವರಲ್ಲಿ ಸುಮಾರು ೬೫೦೦ ಸ್ವೀಪರ್ಸ್ ಪದವೀಧರರು ಉಳಿದುಕೊಂಡಿದ್ದಾರೆಂದು ಹೇಳಿದ್ದಾರೆ, ಇವರ ಬಗ್ಗೆ ಪ್ರತಿ ಅಧಿವೇಶನದಲ್ಲೂ ಧರಪಸೆ ಕೊಡಲಾಗುತ್ತಿದೆ. ಅವರು ಸಹ ಪ್ರತಿ ಸಾರಿಯು ನಾಲ್ಕೈದು ಸಾವಿರ ಜನ ಬಂದು ಇಲ್ಲಿ ಪ್ರತಿ ಭಟನೆ ನಡೆಸಿ ಮನವಿಯನ್ನು ಕೊಟ್ಟು ಹೋಗಿದ್ದಾರೆ. ಅವರಲ್ಲಿ ಕೆಲವರಿಗೆ ಪರ್ಮನೆಂಟಿಯಾಗಿದೆ. ಇನ್ನು ಕೆಲವರಿಗೆ ನಾಲ್ಕೈದು ಜನ ಮರ್ಕಿದ್ದಾರೆ. ಹೀಗಿದ್ದರೂ ಕೂಡ ಅವರಿಗೆ ಇನ್ನೂ ಖಾಯಂ ಕೆಲಸ ಕೊಟ್ಟಿಲ್ಲ. ಆದ್ದರಿಂದ ತಾವು ಅವರಿಗೆ ಬೇಗ ಖಾಯಂ ಕೆಲಸ ಕೊಡಬೇಕು. ಎರಡನೆಯದಾಗಿ ಸ್ವೀಪರ್ಸ್ ಪದವೀಧರರಿಗೆ ಖಾಯಂ ಉದ್ಯೋಗ ಒದಗಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಹೇಳಿದ್ದೀರಿ ಎನು ಕ್ರಮ ತೆಗೆದುಕೊಂಡಿದ್ದೀರಿ ? ಈ ಬಗ್ಗೆ